

ತಾಕಿ ತಾಕಿ ಹೋಗುವ ಅಲೆಗಳಿಗೆ ಕಾಲು ಇಳಿಬಿಟ್ಟುಕೊಂಡು ಇಬ್ಬರೂ ಕುಳಿತರು. 'ಇನ್ನೊಂದು ವಾರ ಇದ್ದು ಹೋಗು' ಎಂಬ ಮಾತೊಂದು ಮುನೀರನ ನಾಲಿಗೆಯ ತುದಿಯ ತನಕ ಬಂದು ಮರಳಿ ಹೋಯಿತು. ಕಾಲೇಜಿಗೆ ಹೊರಟವನಿಗೆ ಹೇಳುವ ಮಾತೇ ಇದು? ಎಂದೆನಿಸಿ ತನ್ನಷ್ಟಕ್ಕೆ ತಾನೇ ನಕ್ಕ. ಆ ನಗು ಕಾಲಿನಿಂದ ನೀರಿಗೆ ಜಾರಿ, ನೀರಿನ ಮೂಲಕ ಹರಿದು, ಪಕ್ಕ ಕಾಲು ಮುಳುಗಿಸಿಕೊಂಡು ನಿಂತಿದ್ದ ಮುನ್ನಿಗೂ ರವಾನೆಯಾದಂತೆ ಅವನೂ ನಕ್ಕ. 'ಯಾಕೆ ನಕ್ಕೆ?' ಎಂದು ಇಬ್ಬರೂ ಕೇಳಿಕೊಳ್ಳಲಿಲ್ಲ.

ಲಾಂಚು ಬಂತು. ತನ್ನ ಸೇತುವೆಯಂಥಾ ಹಿಂಭಾಗವ ದಡಕ್ಕೆ ಚಾಚಿ ಹತ್ತುವವರಿಗೆ ದಾರಿ ಮಾಡಿಕೊಟ್ಟಿತು. ಮುನೀರನನ್ನು ಕಂಡವನೇ ಲಾಂಚಿನಲ್ಲಿ ಕೆಲಸಕ್ಕಿದ್ದ ಅವನ ಗೆಳೆಯ ವಾಗೀಶ, 'ಅರೇ ಮುನಿ, ಏನಿಲ್ಲಿ ಅಚಾನಕ್ಕಾಗಿ? ಒಂದು ಫೋನ್ ಮಾಡೋದಲ್ವಾ?' ಎಂದು ಬೆರಗು ಪ್ರಕಟಿಸುತ್ತಾ ನುಡಿದ. 'ನಮ್ ಹುಡುಗ್ರು. ಟಿಕೆಟ್ ತಗೋಬೇಡಿ' ಎಂದು ಟಿಕೆಟ್ ಕಲೆಕ್ಟರ್‌ಗೆ ತಾಕೀತು ಮಾಡಿದ. 'ನಿಂಗೆ ನಾನೇ ಕಾಲ್ ಮಾಡ್ಬೇಕಂತಿದ್ದೆ ಮುನೀ. ನಾನು ಈ ಲಾಂಚಿನ ಸೂಪರ್‌ವೈಸರ್ ಕೆಲ್ಸ ಬಿಡ್ತಿದೀನಿ. ಯಾರಾದ್ರೂ ಗೊತ್ತಿರೋರ ಹೆಸ್ರು ಹೇಳು ಅಂತ ಬಾಸ್ ಹೇಳಿದಾರೆ. ಸದ್ಯಕ್ಕೆ ಊರಲ್ಲಿರೋ ಗೆಳೆಯ ನೀನೊಬ್ನೇ. ನೀನೇ ಬಂದು ಸೇರ್ಕೊಂಡ್ಬಿಡು. ಏನಿಲ್ಲ. ಹದಿನೈದು ದಿವಸ ಅಷ್ಟೇ. ಕೆಲಸ ಎಲ್ಲ ಕಲ್ತುಕೊಳ್ಬೋದು. ಬಾ ಇಂಜಿನ್ ತೋರಿಸ್ತೀನಿ' ಎಂದು ಒಳಗೆ ಕರೆದುಕೊಂಡು ಹೋದ.

ನಿಮಿಷ ಕಳೆಯಿತು. ನಿಂತಲ್ಲೇ ಲಾಸ್ಯವಾಡುತ್ತಿದ್ದ ಅಲೆಗಳ ಮೇಲೆ ಲಾಂಚು ತೇಲುತ್ತಾ ಹೊರಟಿತು. ಮುನೀರ, ವಾಗೀಶ ಆಡಿದ ಮಾತುಗಳ ಬಗ್ಗೆಯೇ ಯೋಚಿಸುತ್ತಾ ಎಂಜಿನ್ ರೂಮಿನಿಂದ ಹೊರಬಂದ. ಗಾಳಿ ಲಾಂಚಿನಲ್ಲಿ ನಿಂತವರನ್ನು ಮೋಹಕವಾಗಿ ಸೋಕುತ್ತಾ ಬೀಸುತ್ತಿತ್ತು. ಬಿಸಿಲಿಗೆ ನೀರಿನ ಮಟ್ಟ ಕುಸಿದು ಹೊರಬಂದ, ಎಂದೋ ಮುಳುಗಿದ ಮರಗಳು ಹೊಸದಾಗಿ ಜಗತ್ತನ್ನು ನೋಡುತ್ತಿರುವ ಕುತೂಹಲಿಗಳಂತೆ ಇಣುಕುತ್ತಾ ನಿಂತಿದ್ದವು. ಬದುಕು ಮುಳುಗಿದ ಮೇಲೂ ಉಳಿದಿರುವ ಅವುಗಳ ಮೇಲೆ ಆಚೆ ದಡದಿಂದ ಈಚೆ ದಡಕ್ಕೆ ಹಾರಿ ಹೊರಟಿದ್ದ ಹಕ್ಕಿಗಳು ಕುಳಿತು ವಿಶ್ರಮಿಸುತ್ತಿದ್ದವು. ಹಸಿರಾಗಿದ್ದ ದಿನಗಳಲ್ಲಿ ಎಂದೋ ಕಟ್ಟಿ, ಮುಳುಗಿ ಹೋದ ಗೂಡುಗಳ ಸವಿನೆನಪಿನಲ್ಲೆಂಬಂತೆ ಒಣಗಿದ ಮರಗಳು ತಲ್ಲೀನವಾಗಿ ನಿಂತಿದ್ದವು. ದೂರದಲ್ಲಿ ಬೆಟ್ಟಗಳು ಯಾವಾಗ ಬೇಕಾದರೂ ನೆರೆ ಬಂದು ಮತ್ತೆ ಮುಳುಗಿ ಹೋಗಲು ತಯಾರಾಗಿ ನಿಂತಿದ್ದವು. ಅವುಗಳ ಎದೆಯ ಮೇಲೆ ನೀರು ಇಳಿದು ಹೋದ ಗುರುತು ಬಲೆ ಬಲೆಯಾಗಿ ಮೂಡಿತ್ತು. ಲಾಂಚು ಯಾವುದೋ ದೂರ ತೀರದ ಕರೆಗೆ ಸಿಕ್ಕ ಪಯಣಿಗನಂತೆ ಸಾಗುತ್ತಿತ್ತು. ಮುನೀರ, ಲಾಂಚಿನ ಆಚೆ ತುದಿಯಲ್ಲಿ ಬೀಸುವ ಗಾಳಿಗೆ ಮುಖವೊಡ್ಡಿಕೊಂಡು, ನೀರನ್ನೇ ದಿಟ್ಟಿಸುತ್ತಾ ನಿಂತಿದ್ದ ಮುನ್ನಿಯತ್ತ ನೋಡಿದ. ಬಿಸಿಲು, ನೆರಳುಗಳು ವಿಚಿತ್ರವಾಗಿ ಬೆರೆತ ಆ ಜಾಗದಲ್ಲಿ ಮುನ್ನಿಯ ಆಕಾರ ಅಸ್ಪಷ್ಟವಾಗಿತ್ತು. ತಾನು ನಿಂತಿರುವ ಈ ಲಾಂಚಿಗೆ ಸಂಬಂಧವೇ ಪಡದ, ಇನ್ನೆತ್ತಲೋ ಹೊರಟ, ಇನ್ಯಾವುದೋ ದೋಣಿಯ ಪಯಣಿಗನೇನೋ ಎಂಬಂತೆ ನಿಂತಿರುವ ಆ ಆಕೃತಿ ಮುನ್ನಿಯಾಗಿರದೆ ತಾಂಬೆಯಂತೆ ಕಂಡಿತು. ಮರುಕ್ಷಣವೇ ಅದು ತನ್ನ ಅಮ್ಮನೂ ಇರಬಹುದು ಅನ್ನಿಸಿತು. ಎಲ್ಲರ ತೀರವೂ ಬೇರೆಯದೇ ಆಗಿದೆ. ಅಮ್ಮ, ತಾಂಬೆ, ಮುನ್ನಿ, ತಾನು.. ಎಲ್ಲರಿಗೂ ಈ ಬದುಕೆನ್ನುವ ಹಿನ್ನೀರಿನಲ್ಲಿ ಬೇರೆಯದೇ ಆದ ಅಗೋಚರ ಪಥಗಳಿವೆ. ಅವು ಒಂದನ್ನೊಂದು ಹಾಯಬಹುದು. ಆದರೂ ಕೊನೆತನಕ ಜೊತೆಗೆ ಸಾಗದೇ ಇರಬಹುದು. ತಮ್ತಮ್ಮ ತೀರದೆಡೆಗೆ ಹೊರಟ ಪ್ರತ್ಯೇಕ ಪಯಣಿಗರೇ ನಾವೆಲ್ಲ...

ಮುನೀರ ಯೋಚಿಸುತ್ತಾ ನಿಂತಿದ್ದವನು ಥಟ್ಟನೆ ಏನೋ ಹೊಳೆದಂತೆ ನೇರ ಎಂಜಿನ್ ರೂಮಿನೊಳಕ್ಕೆ ನಡೆದ. ಅಲ್ಲಿ ಯಾವುದೋ ಕೆಲಸದಲ್ಲಿ ಮುಳುಗಿದ್ದ ವಾಗೀಶನೆದುರು ನಿಂತು, 'ನೀನು ಹೇಳಿದ್ದರ ಬಗ್ಗೆ ಯೋಚಿಸಿದೆ. ನಾನು ನಾಳೆಯಿಂದಲೇ ಕೆಲಸಕ್ಕೆ ಬರ್ತೇನೆ' ಎಂದ. ಆ ಮಾತಿಗೆ ಖುಷಿಯಾದ ವಾಗೀಶ, 'ನಂಗೆ ಗೊತ್ತಿತ್ತು ಮುನೀ' ಎನ್ನುತ್ತಾ ಅವನನ್ನು ತಬ್ಬಿಕೊಂಡ.

ಲಾಂಚು ದಡ ತಲುಪಿತು. ಕೆಲ ಕ್ಷಣಗಳ ಮಟ್ಟಿಗೆ ಒಂದೇ ಪಯಣದ ಸಹಯಾತ್ರಿಗಳಾಗಿದ್ದ ಪಯಣಿಗರೆಲ್ಲ ಲಗುಬಗೆಯಿಂದ ಇಳಿದು ತಮ್ಮದೇ ಖುಷಿ, ನೋವು, ಆಸೆ, ಕನಸು, ಗುರಿ, ತೀರಗಳಿಂದ ಕೂಡಿದ ತಮ್ತಮ್ಮ ಬದುಕುಗಳೆಡೆಗೆ ಚದುರಿಹೋದರು. ●